# ಸಪ್ತಾಶ್ವ ಧ್ವಜಸ್ಥಂಭ

ಕರ್ನಾಟಕದಲ್ಲಿ ಬೆರಳೆಣಿಕೆಯಷ್ಟು ಸೂರ್ಯ ದೇವಾಲಯಗಳಿವೆ. ಅವುಗಳಲ್ಲಿ ಮಂಗಳೂರಿನ ಮರೋಳಿಯಲ್ಲಿರುವ 12ನೇ ಶತಮಾನದ ಸೂರ್ಯನಾರಾಯಣ ದೇವಾಲಯ ಪ್ರಮುಖವಾದದ್ದು. ಎರಡು ವರ್ಷಗಳ ಹಿಂದೆ ಜೀರ್ಣೋದ್ಧಾರವಾದ ಈ ದೇವಾಲಯವು ಹಲವು ವಿಶೇಷತೆಗಳಿಂದ ಕೂಡಿದೆ. ದ್ವಾದಶ ರಾಶಿಗಳ ಹಾಗೂ 27ನಕ್ಷತ್ರಗಳ ಕಂಬಗಳ ಮೇಲೆ ರಾಶಿ ಮತ್ತು ನಕ್ಷತ್ರಗಳ ಚಿಹ್ನೆಗಳ ಉಬ್ಬುಶಿಲ್ಪಗಳಿರುವುದು ವಿಶೇಷ. ಸಾಮಾನ್ಯವಾಗಿ ಎಲ್ಲಾ ದೇವಾಲಯಗಳ ಮುಂಭಾಗದಲ್ಲಿ ಕೂರ್ಮ ಪೀಠದ ಮೇಲೆ ಧ್ವಜ ಸ್ತಂಭವಿರುತ್ತದೆ. ಆದರೆ, ಈ ದೇವಾಲಯದ ಪ್ರಾಂಗಣಕ್ಕೆ ಕಾಲಿಡುತ್ತಲೇ ಏಳು ಕುದುರೆಗಳನ್ನು ಹೊಂದಿರುವ ರಥದ ಮೇಲಿರುವ ಧ್ವಜಸ್ತಂಭ ಭಕ್ತರ ಗಮನ ಸೆಳೆಯುತ್ತದೆ. ಈರೀತಿಯ ಧ್ವಜಸ್ಥಂಭ ಇತರೆ ದೇವಾಲಯಗಳಲ್ಲಿ ಕಾಣಸಿಗುವುದಿಲ್ಲ.

—ಕೆ. ಶ್ರೀಧರ, ಚಿಂತಾಮಣಿ





# ವಿಶಿಷ್ಟ ಲಿಂಗ

ಲಿಂಗದ ರೂಪದಲ್ಲಿ ಶಿವನನ್ನು ಪೂಜಿಸುತ್ತೇವೆ. ಲಿಂಗಗಳಲ್ಲಿ ಒಂದು, ನಾಲ್ಕು, ಅಪರೂಪಕ್ಕೆ ಐದು ಮುಖಗಳನ್ನು ಹೊಂದಿರುತ್ತವೆ. ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಯಜಮಾನ, ಚಂದ್ರ ಹಾಗೂ ಸೂರ್ಯಲಿಂಗ ಹೀಗೆ ಅಷ್ಟಲಿಂಗಗಳನ್ನು ಪುರಾಣಗಳಲ್ಲಿ ವಿವರಿಸಲಾಗಿದ್ದು ಅಂತಹ ದೇವಾಲಯಗಳು ನಮ್ಮಲ್ಲಿವೆ.

ಬಳ್ಳಾರಿ ಜಿಲ್ಲೆಯ ಸೊಂಡೂರಿನಿಂದ ಬೈಪಾಸ್ ಮೂಲಕ ಹೊಸಪೇಟೆಗೆ ಹೋಗುವ ಮಾರ್ಗದಲ್ಲಿ ಸುಮಾರು ಐದು ಕಿ.ಮೀ ಕ್ರಮಿಸಿದರೆ 'ಭೀಮತೀರ್ಥ' ಸಿಗುತ್ತದೆ .ಇಲ್ಲಿ ಬೆಟ್ಟಗಳ ಮೇಲಿನಿಂದ ಹರಿದು ಬರುವ ನೀರು ಒಂದು ಕಡೆ ಸಂಗ್ರಹವಾಗುತ್ತದೆ. ಹನುಮಂತ ಹಾಗೂ ಇತರೆ ದೇವರುಗಳು ಇಲ್ಲಿ ಪೂಜಿಸಲ್ಪಡುತ್ತಾರೆ. ಆವರಣದಲ್ಲಿರುವ ಲಿಂಗವು ವಿಶಿಷ್ಟವಾಗಿದ್ದು, ಸೂರ್ಯನ ರಥವನ್ನು ಏಳು ಕುದುರೆಗಳು ಎಳೆದುಕೊಂಡು ಹೋಗುವಂತೆ ಇಲ್ಲಿ ಈಶ್ವರಲಿಂಗಕ್ಕೆ ಏಳು ಕುದುರೆಗಳನ್ನು ಕೆತ್ತಲಾಗಿರುವುದು ಅಚ್ಚರಿ ಮೂಡಿಸುತ್ತದೆ. ಒಂದು ಕುದುರೆಯ ಮುಖ ಭಗ್ನವಾಗಿದೆ.ಇಂತಹ ವಿಶಿಷ್ಟ ಶಿವಲಿಂಗ ಬೇರೆಲ್ಲೂ ಕಾಣಸಿಗುವುದಿಲ್ಲ.

—ಜಿ. ಪದ್ಮಾ, ಕಾವೂರು

# ಚಿತ್ರದುರ್ಗದ ಹೆಮ್ಮೆಯ ತಾಣ

ವಿಶಾಲವಾದ ಮರದ ನೆರಳಲ್ಲಿ ಹಾಯಾಗಿ ಮಲಗಿರುವ ಒಬ್ಬ, ಕೈಯಲ್ಲಿಕೋಲು ಹಿಡಿದು ಕುಳಿತಿರುವ ಇನ್ನೊಬ್ಬ. ಮರದ ಮೇಲೆ ಆಟವಾಡ್ತಾ ಇರುವ ಒಬ್ಬಹುಡುಗನನ್ನು ಈ ಚಿತ್ರದಲ್ಲಿ ಕಾಣುವಿರಿ. ಇವು ಯಾವೂ ನಿಜವಾದುದಲ್ಲ!

ಅಂದ ಹಾಗೇ ಇಂತಹ ಸಾವಿರಾರು ಕಲಾಕೃತಿಗಳನ್ನು ಚಿತ್ರದುರ್ಗದ ಮುರುಘಾವನದಲ್ಲಿ ಕಾಣಬಹುದು. ಇಲ್ಲಿನ ಎಲ್ಲವೂ ಕಲಾವಿದರ ಕೈಚಳಕದ ಮತ್ತು ಪರಿಶ್ರಮದ ಚಿತ್ತಾಕರ್ಷಕ ಬೊಂಬೆಗಳು. ಆಕರ್ಷಕ ಬಣ್ಣಗಳನ್ನು ಬಳಸಿಮಾಡಿರುವ ಇಲ್ಲಿನ ಪ್ರತಿಯೊಂದೂ ಕೃತಿಯೂ ಅದ್ಭುತ. ಒನಕೆ ಓಬವ್ವ ಮತ್ತು ಕಲ್ಲಿನಕೋಟೆಗೆ ಹೆಸರಾಗಿದ್ದ ಚಿತ್ರದುರ್ಗಕ್ಕೆ ಮತ್ತೊಂದು ಹೆಗ್ಗಳಿಕೆ ಈ ಮುರುಘಾವನ.

—ಆರ್. ವೀರೇಶ್ ಕುಮಾರ್, ಬೆಂಗಳೂರು

